ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಗದಗ ಜಿಲ್ಲೆ

ರೈತರಿಗಾಗಿ ಹಾಗೂ ಕೃಷಿ ವಿಸ್ತರಣೆ ಸಿಬ್ಬಂದಿಗಾಗಿ


# ಕೃಷಿ ವಿಜ್ಞಾನ ಪತ್ರಿಕೆ


ಸಂಪುಟ-7 | ಜನವರಿ - ಮಾರ್ಚ, 2015 | ತ್ರೈಮಾಸಿಕ ಪತ್ರಿಕೆ | ಸಂಚಿಕೆ-1



**ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕರು ಹಾಗೂ ಪ್ರಕಾಶಕರು

**ಡಾ॥ ಎಲ್.ಜಿ. ಹಿರೇಗೌಡರ**

ಪ್ರೋಗ್ರಾಂ ಕೋ-ಆರ್ಡಿನೇಟರ್

ಸಂಪಾದಕರು

**ಶ್ರೀ ಎಸ್.ಎಚ್.ಆದಾಪೂರ**

ವಿಷಯ ತಜ್ಞರು (ಕೃಷಿ ವಿಸ್ತರಣೆ)

ಸುದ್ದಿ ಸಂಪಾದಕರು

**ಶ್ರೀಮತಿ ಸುಧಾ ರಾಯನಗೌಡರ**

ವಿಷಯ ತಜ್ಞರು (ಗೃಹ ವಿಜ್ಞಾನ)

ಸಹ ಸಂಪಾದಕರು

**ಶ್ರೀ ವ್ಹಿ.ಡಿ.ವೈಕುಂಠೆ**

ವಿಷಯ ತಜ್ಞರು (ಬೇಸಾಯಶಾಸ್ತ್ರ)

**ಶ್ರೀ ಎಸ್.ಕೆ. ಮುದ್ಲಾಪೂರ**

ವಿಷಯ ತಜ್ಞರು (ಸಸ್ಯ ಸಂರಕ್ಷಣೆ)

**ಶ್ರೀ ಕೆ.ಟಿ. ಪಾಟೀಲ**

ವಿಷಯ ತಜ್ಞರು (ತೋಟಗಾರಿಕೆ)

**ಶ್ರೀ ಎನ್.ಎಚ್. ಭಂಡಿ**

ವಿಷಯ ತಜ್ಞರು (ಮಣ್ಣು ವಿಜ್ಞಾನ)

**ಡಾ॥ ಬಿ.ಎಮ್.ಮುರಗೋಡ**

ಕಾರ್ಯಕ್ರಮ ಸಹಾಯಕರು (ಪಶು ಸಂಗೋಪನೆ)

ವಿನ್ಯಾಸ ಹಾಗೂ ಅಕ್ಷರ ಜೋಡಣೆ

**ಶ್ರೀಮತಿ ಲಲಿತಾ ಅಸೂಟಿ**

ಕಾರ್ಯಕ್ರಮ ಸಹಾಯಕರು (ಗಣಕಯಂತ್ರ)


## ಸಂಪಾದಕರ ನುಡಿ

ಕಳೆದ ತ್ರೈಮಾಸಿಕದಲ್ಲಿ ಕೇಂದ್ರದ ದತ್ತು ಗ್ರಾಮಗಳ ರೈತರಿಗೆ ಹಾಗೂ ರೈತ ಮಹಿಳೆಯರಿಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಹಿಂಗಾರು ಹಂಗಾಮಿನ ಬೆಳೆಗಳಾದ ಕಡಲೆ, ಕುಸುಬೆ, ಜೋಳ, ಗೋಧಿ, ಸೂರ್ಯಕಾಂತಿ ಬೆಳೆಗಳಲ್ಲಿ ಒಳ ಆವರಣ ಹಾಗೂ ಹೊರ ಆವರಣ ತರಬೇತಿ, ಕ್ಷೇತ್ರ ಭೇಟಿ, ಕ್ಷೇತ್ರೋತ್ಸವಗಳು, ರೈತರ ದಿನಾಚರಣೆ, ವಿಶ್ವ ಆಹಾರ ದಿನಾಚರಣೆ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಸೂಕ್ತವಾದ ಕೃಷಿ ತಂತ್ರಜ್ಞಾನಗಳನ್ನು ವರ್ಗಾಯಿಸಲಾಯಿತು. ತಂತ್ರಜ್ಞಾನ ಪ್ರಸಾರಣೆಯನ್ನು ಬಲಪಡಿಸಲು ಇದೇ ಜನೆವರಿ 28 ರಿಂದ 31 ರ ವರೆಗೆ ಕೃಷಿ ತಂತ್ರಜ್ಞಾನ ಸಪ್ತಾಹವನ್ನು ಕೇಂದ್ರವು ಆಚರಿಸುತ್ತಿದೆ. ಈ ನಿಮಿತ್ತ ಮೆಣಸಿನಕಾಯಿ ಬೆಳೆಯಲ್ಲಿ ರಫ್ತು ಗುಣಮಟ್ಟದ ಉತ್ಪಾದನೆ ಕುರಿತು ವಿಚಾರ ಸಂಕಿರಣ, ಹೈನುಗಾರಿಕೆಯಲ್ಲಿ ತರಬೇತಿ, ಸ್ವ-ಸಹಾಯ ಗುಂಪುಗಳಿಗೆ ಆದಾಯ ತರುವಂತಹ ಚಟುವಟಿಕೆಗಳಲ್ಲಿ ತರಬೇತಿ, ಕೃಷಿ ವಸ್ತು ಪ್ರದರ್ಶನ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ರೈತಬಾಂಧವರೆಲ್ಲರೂ ಭಾಗವಹಿಸಿ ಪ್ರಯೋಜನ ಪಡೆಯಲು ವಿನಂತಿಸುತ್ತೇವೆ.

ತಮ್ಮೆಲ್ಲರಿಗೂ ಹೊಸ ವರ್ಷದ ಹಾಗೂ
ಮಕರ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು

## ಬೇಸಿಗೆ ಶೇಂಗಾ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ

ಈಗಾಗಲೇ ಬಿತ್ತಿದ ಬೇಸಿಗೆ ಶೇಂಗಾ ಬೆಳೆಯು ಹೂ ಬಿಡುವ ಹಂತದಲ್ಲಿ ಇದ್ದಾಗ (ಬಿತ್ತಿದ 35 ರಿಂದ 45 ದಿನಗಳು) ಪ್ರತಿ ಎಕರೆಗೆ 12-15 ಕಿಲೋ ಯೂರಿಯಾ ಗೊಬ್ಬರ ಹಾಗೂ 2 ಕ್ವಿಂಟಲ್ ಜಿಪ್ಸಂ ಗೊಬ್ಬರವನ್ನು ಎಡೆಕುಂಟೆಯ ಸಹಾಯದಿಂದ ಕೊಟ್ಟು ಸಾಲಿಗೆ ಮಣ್ಣೇರಿಸಬೇಕು. ಜಿಪ್ಸಂ ಗೊಬ್ಬರವನ್ನು ಕೊಡುವುದರಿಂದ ಮಣ್ಣಿನ ಗುಣಧರ್ಮ ಸುಧಾರಣೆ ಆಗುವುದರ ಜೊತೆಗೆ ಬಾರಂಗಿ (ಕೊಂಡಿ) ಚುಚ್ಚುವ ಪ್ರಮಾಣ ಹೆಚ್ಚಾಗುತ್ತದೆ. ನಂತರ ಶೇಂಗಾ ಕಾಳನಲ್ಲಿ ಎಣ್ಣೆಯ ಅಂಶ ಹೆಚ್ಚಾಗಿ ಇಳುವರಿ ಮಟ್ಟ ಹೆಚ್ಚಾಗಲು ಸಹಕಾರಿ ಆಗುತ್ತದೆ.

## ಬೇಸಿಗೆ ಶೇಂಗಾ ಬೆಳೆ ಬಾಧಿಸುವ ಕೀಟಗಳು ಹಾಗೂ ರೋಗಗಳ ನಿರ್ವಹಣೆ

**1) ಸುರಳಿ ಪೂಚಿ ಕೀಟ :** ಈ ಕೀಟವು ಶೇಂಗಾ ಬಿತ್ತಿದ 25 ರಿಂದ 30 ದಿನಗಳ ನಂತರದಲ್ಲಿ ಕಾಣಿಸುತ್ತದೆ. ಸುರಳಿ ಪೂಚಿಯ ಪತಂಗಗಳು ಹೊಸ ಚಿಗುರು ಎಲೆಗಳ ಮೇಲೆ ತತ್ತಿಗಳನ್ನು ಇಡುತ್ತವೆ. ತತ್ತಿ ಇಟ್ಟ 3 ರಿಂದ 5 ದಿನಗಳಲ್ಲಿ ತತ್ತಿಗಳು ಮರಿಗಳಾಗಿ ಎರಡು ಎಲೆಗಳನ್ನು ಕೂಡಿಸಿ ಕೆರೆದು ತಿಂದು ಎಲೆಗಳು ಒಣಗುವಂತೆ ಮಾಡುತ್ತವೆ. ಕೀಟದ ಬಾಧೆಯಿಂದ ಶೇಕಡಾ 30 ರಿಂದ 50 ರಷ್ಟು ಬೆಳೆ ನಷ್ಟವಾಗುತ್ತದೆ.

**ಹತೋಟಿ :**

- ಶೇಂಗಾ ಬಿತ್ತಿದ 25 ರಿಂದ 30 ದಿನಗಳಲ್ಲಿ 30 ಮಿ.ಲೀ ಪ್ರೊಫೇನೊಫಾಸ್ ಮತ್ತು 30 ಮಿ.ಲೀ ನಿಂಬಿಸಿಡಿನ್ ಔಷಧಿಗಳನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.
- ಶೇಂಗಾ ಬಿತ್ತಿದ 45 ರಿಂದ 50 ದಿನಗಳಲ್ಲಿ 30 ಮಿ.ಲೀ ಕಾರ್ಬೊಸಲ್ಫಾನ್ ಮತ್ತು 30 ಮಿ.ಲೀ. ನಿಂಬಿಸಿಡಿನ್ ಔಷಧಿಗಳನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

**2) ಎಲೆ ತಿನ್ನುವ ಕೀಟಗಳು :** ಎಲೆ ತಿನ್ನುವ ಕೀಟಗಳು ಎಲೆಗಳ ಅಂಚಿನಿಂದ ಮತ್ತು ಎಲೆಗಳ ಮಧ್ಯ ಭಾಗಗಳನ್ನು ತಿಂದು ದ್ಯುತಿಸಂಶ್ಲೇಷಣೆ ಕ್ರಿಯೆಯನ್ನು ಕುಂಠಿತಗೊಳಿಸುತ್ತವೆ. ಇದರಿಂದ ಶೇಕಡಾ 15 ರಿಂದ 20 ರಷ್ಟು ಬೆಳೆ ನಷ್ಟವಾಗುತ್ತದೆ.

**ಹತೋಟಿ :**

- ಈ ಕೀಟದ ಬಾಧೆ ಕಂಡ ತಕ್ಷಣ 0.4 ಮಿ.ಲೀ ಇಂಡಾಕ್ಸಿಕಾರ್ಬ ಅಥವಾ 0.4 ಗ್ರಾಂ ಇಮಾಮೆಕ್ಟಿನ್ ಬೆಂಜೋಯೇಟ ಅಥವಾ 0.4 ಮಿ.ಲೀ ಸ್ಪೈನೋಸೈಡ್ ಔಷಧಿಗಳನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

**3) ಎಲೆ ಚುಕ್ಕೆ ರೋಗ :** ಈ ರೋಗ ಬೆಳೆ ಬಿತ್ತಿದ 75 ದಿನದ ನಂತರ ಬಂದರೆ ಹಾನಿಯ ಪ್ರಮಾಣ ಕಡಿಮೆ. ಆದರೆ ಬೆಳೆ ಬಿತ್ತಿದ 60 ರಿಂದ 70 ದಿನದ ಒಳಗಡೆ ರೋಗ ಕಾಣಿಸಿದರೆ ಬೆಳೆ ಹಾನಿಯ ಪ್ರಮಾಣ ಶೇಕಡಾ 30 ರಿಂದ 40 ರಷ್ಟು ಆಗುತ್ತದೆ. ಕಾಳುಗಳ ತೂಕ ಕೂಡಾ ಕಡಿಮೆಯಾಗುತ್ತದೆ. ಆದ್ದರಿಂದ ರೈತರು ತಪ್ಪದೇ ಈ ರೋಗವನ್ನು ಹತೋಟಿ ಮಾಡಬೇಕು.

**ಹತೋಟಿ :**

- ರೋಗ ಕಂಡ ತಕ್ಷಣ 1.5 ಮಿ.ಲೀ. ಹೆಕ್ಸಾಕೋನಾಜೋಲ್ ಅಥವಾ 1 ಮಿ.ಲೀ ಪ್ರತಿ ಪ್ರೊಪಿಕೋನಾಜೋಲ್ ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

## ಮಾವಿನ ಬೆಳೆಗೆ ಬರುವ ಕೀಟಗಳು ಹಾಗೂ ರೋಗಗಳ ನಿರ್ವಹಣೆ

**ಕೀಟಗಳು :**

**1) ಜಿಗಿ ಹುಳು :** ಈ ಕೀಟವು ಮಾವಿನ ಬೆಳೆಗೆ ಡಿಸೆಂಬರ ಮತ್ತು ಜನವರಿ ತಿಂಗಳಲ್ಲಿ ಕಾಣಿಸಿಕೊಳ್ಳುತ್ತದೆ. ಹುಳದ ಬಾಧೆಯು ಹೂವು ಬಿಡುವ ಸಮಯದಲ್ಲಿ ಹೆಚ್ಚು ಕಾಣಿಸುತ್ತದೆ. ಜಿಗಿಹುಳು ಮೊಗ್ಗು, ಹೂವು ಮತ್ತು ಗೊಂಚಲುಗಳಿಂದ ರಸವನ್ನು ಹೀರುವದರಿಂದ ಎಲೆಗಳ ಮೇಲೆ ಜಿಗಿ ಕಾಣಿಸಿ ನಂತರ ಕಪ್ಪು ಶಿಲೀಂಧ್ರ ಬೆಳೆಯುವದರಿಂದ ದ್ಯುತಿಸಂಶ್ಲೇಷಣೆ ಕ್ರಿಯೆ ಕುಂಠಿತವಾಗುತ್ತದೆ. ಇದರಿಂದ ಹೂವುಗಳು, ಮಿಡಿಗಳು ಮತ್ತು ಚಿಕ್ಕ ಕಾಯಿಗಳು ಉದುರುವವು. ಕೀಟದ ಬಾಧೆ ಹೆಚ್ಚಾಗಿದ್ದರೆ, ಬೆಳೆಯ ಇಳುವರಿ ಶೇಕಡಾ 20 ರಿಂದ 50 ರಷ್ಟು ನಷ್ಟವಾಗುತ್ತದೆ. ಈ ಕೀಟದ ಬಾಧೆಯಿಂದ ಬೆಳೆಯನ್ನು ರಕ್ಷಿಸಲು ಮೊಗ್ಗು ಬಿಡುವ ಹಂತದಲ್ಲಿ ತಪ್ಪದೇ ಮಾವಿನ ಬೆಳೆಗೆ ಮೊದಲನೆಯ ಸಿಂಪರಣೆ ಮಾಡಬೇಕು.

**ಹತೋಟಿ ಕ್ರಮಗಳು :**

➢ **ಮೊದಲನೇಯ ಸಿಂಪರಣೆ :** 2 ಮಿ.ಲೀ ಡೈಮಿಥೋಯೇಟ ಅಥವಾ 1.5 ಮಿ.ಲೀ ಮೊನೊಕ್ರೋಟೋಫಾಸ್ ಮತ್ತು 2 ಮಿ.ಲೀ ಬೇವಿನ ಎಣ್ಣೆಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಮೊಗ್ಗು ಬಿಡುವ ಸಮಯದಲ್ಲಿ ಸಿಂಪರಣೆ ಮಾಡಬೇಕು.

➢ **ಎರಡನೇಯ ಸಿಂಪರಣೆ :** 0.4 ಮಿ.ಲೀ ಇಮಿಡಾಕ್ಲೋಪ್ರಿಡ್ ಅಥವಾ 0.4 ಗ್ರಾಂ ಥೈಯೋಮಿಥಾಕ್ಸಾಮ್ ಪ್ರತಿ ಲೀಟರ ನೀರಿಗೆ ಕೂಡಿಸಿ ಮೊದಲನೇಯ ಸಿಂಪರಣೆ ನಂತರ 20 ರಿಂದ 25 ದಿನಗಳಾದ ಮೇಲೆ ಸಿಂಪರಣೆ ಮಾಡಬೇಕು.

➢ **ಮೂರನೇಯ ಸಿಂಪರಣೆ :** 1 ಮಿ.ಲೀ. ಲ್ಯಾಂಬ್ಡಾ ಸಿಲೋಥ್ರಿನ್ ಅಥವಾ 0.4 ಮಿ.ಲೀ ಥೈಮಿಥಾಕ್ಸಿನ್ ಔಷಧಿಗಳನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಎರಡನೇಯ ಸಿಂಪರಣೆ ನಂತರ 20 ರಿಂದ 25 ದಿನಗಳಾದ ಮೇಲೆ ಸಿಂಪರಣೆ ಮಾಡಬೇಕು.

**ರೋಗಗಳು :**

**ಬೂದು ರೋಗ :** ಈ ರೋಗವು ಮಾವಿನ ಬೆಳೆಯ ಎಲೆ, ಹೂವು ಮತ್ತು ಸಣ್ಣ ಮಿಡಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಎಲೆಗಳ ಮೇಲೆ ರೋಗವು ಕಾಣಿಸಿಕೊಂಡ ನಂತರ ಎಲೆಗಳು ಕಂದು ಬಣ್ಣಕ್ಕೆ ತಿರುಗಿ ಕೆಳಮುಖವಾಗಿ ಮುದುಡುತ್ತವೆ. ಹೂವುಗಳು ಮತ್ತು ಹೂವುಗಳ ದೇಟುಗಳ ಮೇಲೆ ಬಿಳಿ ಬೂದಿ ಬಣ್ಣದ ಶಿಲೀಂದ್ರಗಳು ಬೆಳೆದು ಹೂವುಗಳು ಉದುರುತ್ತವೆ. ನಂತರ ಮಿಡಿಗಳು ಹಳದಿ ಬಣ್ಣಕ್ಕೆ ತಿರುಗಿ ಉದುರುತ್ತವೆ.

**ಹತೋಟಿ ಕ್ರಮಗಳು :**

➢ ಈ ರೋಗ ಕಾಣಿಸಿಕೊಂಡ ತಕ್ಷಣ 4 ಗ್ರಾಂ ನೀರಿನಲ್ಲಿ ಕರುಗುವ ಗಂಧಕ ಅಥವಾ 1.5 ಮಿ.ಲೀ ಹೆಕ್ಸಾಕೋನಾಜೋಲ್ ಅಥವಾ 1 ಮಿ.ಲೀ ಪ್ರೊಪಿಕೋನಾಜೋಲ್ ಅಥವಾ 1 ಗ್ರಾಂ ಕಾರ್ಬಾಂಡೈಜಿಮ್ ಶಿಲೀಂದ್ರ ನಾಶಕವನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ

## ಬಾಳೆ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ

ಬಾಳೆಯು ಒಂದು ಪ್ರಮುಖವಾದ ಹಣ್ಣಿನ ಬೆಳೆ. ಈ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ ಒಂದು ಮುಖ್ಯವಾದ ಬೇಸಾಯ ಕ್ರಮವಾಗಿದೆ. ಈ ಬೆಳೆ ನಾಟಿಮಾಡಿದ 35 ದಿವಸಗಳಿಂದ 175 ದಿವಸಗಳವರೆಗೆ 6 ಹಂತಗಳಲ್ಲಿ ಗೊಬ್ಬರಗಳನ್ನು ಗಿಡಕ್ಕೆ ಒದಗಿಸಬೇಕು. ಸಾಮಾನ್ಯವಾಗಿ ಪೊಟ್ಯಾಷ ಗೊಬ್ಬರಗಳನ್ನು ರೈತರು ಕಡಿಮೆ ಪ್ರಮಾಣ ಅಥವಾ ಹಾಕದೇ ಇರುವದರಿಂದ ಈ ಬೆಳೆಯಲ್ಲಿ ಇಳುವರಿ ಕುಂಠಿತವಾಗುತ್ತದೆ. ಈ ಬೆಳೆಗೆ ಕೆಳಗೆ ಕಾಣಿಸಿದ ಗೊಬ್ಬರಗಳನ್ನು ಆಯಾ ಪ್ರಮಾಣದಲ್ಲಿ ಹಂತ ಹಂತವಾಗಿ ಕೊಡಬೇಕು.

| ನಾಟಿ ಮಾಡಿದ | ಪ್ರತಿ ಗಿಡಕ್ಕೆ ಹಾಕಬೇಕಾದ ಗೊಬ್ಬರ (ಗ್ರಾಂ) | | |
|---|---|---|---|
| | ಯುರಿಯಾ | ಡಿ.ಎ.ಪಿ | ಪೊಟ್ಯಾಷ |
| 35 ದಿನಗಳ ನಂತರ | 90 | 45 | 92 |
| 70 ದಿನಗಳ ನಂತರ | 80 | 45 | 92 |
| 105 ದಿನಗಳ ನಂತರ | 80 | 45 | 92 |
| 140 ದಿನಗಳ ನಂತರ | 80 | 45 | 92 |
| 175 ದಿನಗಳ ನಂತರ | 80 | 45 | 92 |
| ಒಟ್ಟು | 410 | 225 | 460 |

ಬಾಳೆ ಬೆಳೆಗೆ ಸಿಂಪರಣೆ ಮೂಲಕ ಲಘು ಪೋಷಕಾಂಶಗಳನ್ನು ಹೊಂದಿರುವಂತಹ ಬಾಳೆ ಸ್ಪೇಶಲ್‌ನ್ನು ಕೊಡಬೇಕು. ಎಂಟು ಹಂತಗಳಲ್ಲಿ ಅಂದರೆ ಬಾಳೆ ನಾಟಿಮಾಡಿದ 4 ನೇ ತಿಂಗಳು, 5 ನೇ ತಿಂಗಳು, 6 ನೇ ತಿಂಗಳು, 7ನೇ ತಿಂಗಳು ಮತ್ತು 8 ನೇ ತಿಂಗಳು ಇರುವಾಗ ಮತ್ತು ಗೊನೆ ಬಿಟ್ಟ ನಂತರ ಎರಡು ಬಾರಿ 30 ದಿನಗಳ ಅಂತರದಲ್ಲಿ ಪ್ರತಿ ಲೀಟರ ನೀರಿಗೆ 6 ಗ್ರಾಂ ಬಾಳೆ ಸ್ಪೇಶಲನ್ನು ಸಿಂಪರಣೆ ಮಾಡಬೇಕು. ಈ ಸಿಂಪರಣೆಯಿಂದ ಶೇಕಡ 15 ರಷ್ಟು ಇಳುವರಿ ಜಾಸ್ತಿ ಬರುವುದು ಮತ್ತು ಬೆಳೆಗೆ ರೋಗ ನಿರೋಧಕ ಶಕ್ತಿ ಬರುವುದು.

ಈ ಬೆಳೆಗೆ ಗೊನೆಯ ಮುಖಾಂತರ ಕೂಡ ಪೋಷಕಾಂಶಗಳನ್ನು ಒದಗಿಸಬಹುದು. ಬಾಳೆಯಲ್ಲಿ ಗೊನೆ ಬಿಟ್ಟಾಗ ಗೊನೆಯ ಕಡೆಯ ಭಾಗದಲ್ಲಿ ಹೂವಿನ ಭಾಗವನ್ನು ಕತ್ತರಿಸಿದ ನಂತರ ಬಾಳೆಯ ಗೊನೆಗೆ 8 ಗ್ರಾಂ ಯೂರಿಯಾ, 8 ಗ್ರಾಂ ಸಲ್ಫೇಟ್ ಆಫ್ ಪೊಟ್ಯಾಷ ಮತ್ತು 500 ಗ್ರಾಂ ಆಕಳಿನ ಶಗಣಿಯನ್ನು 100 ಮಿ.ಲೀ ನೀರಿನಲ್ಲಿ ಬೆರೆಸಿ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಗೊನೆಯ ಕೊನೆಯ ಭಾಗಕ್ಕೆ ಕಟ್ಟಬೇಕು. ಇದರಿಂದ ಶೇ 10 ರಷ್ಟು ಇಳುವರಿ ಹೆಚ್ಚುವುದು ಮತ್ತು ಗೊನೆಗೆ ಒಳ್ಳೆಯ ಹೊಳಪು ಬರುವುದು.

## ಹೈನು-ದನಗಳಿಗೆ ಪೌಷ್ಠಿಕ ಆಹಾರ : ಅಜೋಲ್ಲಾ

ಜಾನುವಾರುಗಳಿಗೆ ಕೊಡುವ ಆಹಾರದಲ್ಲಿ ಶೇಕಡಾ 5-10 ರಷ್ಟು ಅಜೋಲ್ಲಾವನ್ನು ಆಹಾರವಾಗಿ ಕೊಡಬಹುದು. ಅಜೋಲ್ಲಾ ನೀರಿನಲ್ಲಿ ವೇಗವಾಗಿ ಬೆಳೆಯುವ "ಜಲಸಸ್ಯ". ಈ ಸಸ್ಯದಲ್ಲಿ ಅಧಿಕ ಪ್ರೋಟೀನ್, ವಿಟಮಿನ್, ಖನಿಜಾಂಶಗಳು ಮತ್ತು ಅಮೈನೊ ಆಮ್ಲಗಳಿರುತ್ತವೆ.

**ಅಜೋಲ್ಲಾ ಉತ್ತಮವಾಗಿ ಬೆಳೆಯಲು ಬೇಕಾದ ಅವಶ್ಯಕ ಅಂಶಗಳು** :

1. ನೀರು : ಅಜೋಲ್ಲಾ ಸ್ವಚ್ಛವಾದ ನೀರಿನಲ್ಲಿ ಮಾತ್ರ ಬೆಳೆಯುತ್ತದೆ
2. ಉಷ್ಣಾಂಶ : ಅಜೋಲ್ಲಾ 20-30 ಡಿಗ್ರಿ ಸೆಲ್ಸಿಯಸ್ ಉಷ್ಣತೆಯಲ್ಲಿ ಸಮೃದ್ಧಿಯಾಗಿ ಬೆಳೆಯುತ್ತದೆ.
3. ಗಾಳಿ : ಹೆಚ್ಚಿನ ಗಾಳಿ ತಾಕದಂತೆ ಎಚ್ಚರಿಕೆ ವಹಿಸಬೇಕು.
4. ಸೂರ್ಯನ ಪ್ರಕಾಶ : ಅಜೋಲ್ಲಾ ತನ್ನ ಆಹಾರವನ್ನು ತಾನೇ ತಯಾರಿಸಿಕೊಳ್ಳುವುದರಿಂದ ದ್ಯುತಿಸಂಶ್ಲೇಷಣಾ ಕ್ರಿಯೆಗೆ ಸೂರ್ಯನ ಪ್ರಕಾಶ ಅಗತ್ಯ.
5. ಪೌಷ್ಠಿಕಾಂಶಗಳು : ರಂಜಕ ಪೋಷಕಾಂಶ ಅತಿ ಮುಖ್ಯವಾದುದು.

**ಅಜೋಲ್ಲಾ ಬೆಳೆಯುವ ವಿಧಾನ** : ಪ್ರತಿ ನಿತ್ಯ ಒಂದು ಕಿಲೋದಷ್ಟು ಅಜೋಲ್ಲಾ ಉತ್ಪಾದಿಸಲು ಅನುಸರಿಸಬೇಕಾದ ಕ್ರಮಗಳು.

1) ನೆರಳಿರುವ ಸ್ಥಳದಲ್ಲಿ 10 ಅಡಿ ಉದ್ದ ಮತ್ತು 4 ಅಡಿ ಅಗಲ ಹಾಗೂ ಒಂದು ಅಡಿ ಆಳ ಗುಂಡಿ ತೆಗೆಯಿರಿ

2) ಗುಂಡಿಯೊಳಗಿನ ಸುತ್ತ ದಿಂಡು ಕಟ್ಟಿ ಗುಂಡಿಯ ಒಳಮೈ ಪ್ಲಾಸ್ಟಿಕ ಹಾಳೆಯಿಂದ ಹೊದಿಸುವ ಮುನ್ನ ಗುಂಡಿ ತಳ ಭಾಗದಲ್ಲಿ ಮರದ ಬೇರುಗಳಿಲ್ಲದಿರುವದನ್ನು ಖಚಿತಪಡಿಸಿಕೊಳ್ಳಿ. ಈ ಬೇರುಗಳಿದ್ದರೆ ಪ್ಲಾಸ್ಟಿಕ ಹರಿಯುತ್ತದೆ. ಅಂಥ ಸಮಯದಲ್ಲಿ ಬೇರು ಮುಚ್ಚುವರೆಗೂ (ಅರ್ಧ ಅಡಿ) ಮರಳನ್ನು ಸಮತಟ್ಟಾಗಿ ಹರಡಿ. ಆದಷ್ಟು ಅದರಲ್ಲಿ ಇದ್ದ ಕಲ್ಲುಗಳನ್ನು ಆರಿಸಿ ತೆಗೆಯಬೇಕು. ತದನಂತರ ಭತ್ತದ ಹುಲ್ಲನ್ನು ತಗ್ಗಿನುದ್ದಕ್ಕೂ ಹರಡಬೇಕು. ಈ ಗುಂಡಿಯಲ್ಲಿ ಒಳ ಮೈ ಮುಚ್ಚುವಂತೆ ದಪ್ಪನಾದ ಪಾಲಿಥಿನ್ ಹಾಳೆಯನ್ನು ಹೊದಿಸಬೇಕು. ದೋಣಿ ಅಥವಾ ಸಿಮೆಂಟನಿಂದ ಕಟ್ಟಿದ ಗುಂಡಿಯಲ್ಲಿ ಪಾಲಿಥೀನ್ ಹಾಳೆಯ ಅವಶ್ಯಕತೆ ಇರುವುದಿಲ್ಲ.

3) ಗುಂಡಿಗೆ ಹಾಳೆ ಹೊಂದಿಸಿದ ನಂತರ ಮೇಲ್ಭಾಗದಲ್ಲಿ ಗುಂಡಿಯ ಸುತ್ತ ಕಲ್ಲುಗಳನ್ನು ಜೋಡಿಸಿರಿ.

4) ಗುಂಡಿಯ ಮುಕ್ಕಾಲು ಭಾಗಕ್ಕೆ ಸುತ್ತಲೂ ನೀರು ಸುರಿಯಿರಿ

5) ಗುಂಡಿಯ ತಳ ಭಾಗದಲ್ಲಿ ಒಂದು ಇಂಚು ಫಲವತ್ತಾದ ಕಲ್ಲು ರಹಿತ ಕೆಂಪು ಮಣ್ಣನ್ನು ಹಾಕಬೇಕು

6) ಒಂದು ಬಕೆಟ್‌ನಲ್ಲಿ (2 ರಿಂದ 3 ಕಿಲೋ) ಆಕಳ ಸಗಣಿಯನ್ನು ನೀರಿನೊಂದಿಗೆ ಬೆರೆಸಿ ತಿಳಿ ರಾಡಿಯನ್ನು ಹಾಕಬೇಕು

7) ಒಂದು ಬೊಗಸೆ (ಅರ್ಧದಿಂದ ಒಂದು ಕಿಲೋದಷ್ಟು) ಪರಿಶುದ್ಧವಾದ, ಆರೋಗ್ಯಪೂರ್ಣ ಅಜೋಲ್ಲಾವನ್ನು ಗುಂಡಿಗೆ ಹಾಕಿರಿ.

8) ಒಂದು ವಾರ ಅಥವಾ ಎಂಟನೇ ದಿನ ಅಜೋಲ್ಲಾ ಗುಂಡಿ ತುಂಬಾ ಹಚ್ಚ ಹಸುರಿನ ಚಾಪೆಯಂತೆ ಹರಡಿಕೊಳ್ಳುತ್ತದೆ

9) ಮಳೆಗಾಲದಲ್ಲಿ ಪ್ರತಿ ನಿತ್ಯ ಸುಮಾರು 3 ಕಿಲೋ ತಾಜಾ ಅಜೋಲ್ಲಾವನ್ನು ಕೊಯಿಲು ಮಾಡಬಹುದು.

10) ಸಾವಯವವಾಗಿ ಬೆಳೆಸಿದ ಅಜೋಲ್ಲಾವನ್ನು ನೀರಿನಲ್ಲಿ ಸ್ವಚ್ಛಮಾಡಿ ದಾನಿಮಿಶ್ರಣ ಜೊತೆ ಮಿಶ್ರಣಮಾಡಿ ಹೈನು-ದನಗಳಿಗೆ 1 ರಿಂದ 2 ಕಿಲೋ ಪ್ರತಿ ದಿನ ಕೊಡಬಹುದು.

## ಪೌಷ್ಠಿಕ ತೋಟ /ತಾರಸಿ ತೋಟ



"ಊಟ ಬಲ್ಲವನಿಗೆ ರೋಗವಿಲ್ಲ" ಎಂಬ ಜನಪ್ರಿಯ ಗಾದೆ ಎಲ್ಲರಿಗೂ ಗೊತ್ತಿದೆ. ಎಲ್ಲ ಜೀವಂತ ಪ್ರಾಣಿಗಳಿಗೂ ಆಹಾರ ಅವಶ್ಯ. ಆಹಾರವಿಲ್ಲದೇ ಬದುಕುವುದು ಸಾಧ್ಯವಿಲ್ಲ. ಆಹಾರ ಸೇವನೆಯ ಮುಖ್ಯ ಉದ್ದೇಶ ಬರೀ ಹಸಿವೆಯನ್ನು ಹಿಂಗಿಸಿಕೊಳ್ಳುವುದಷ್ಟೇ ಅಲ್ಲ ದೇಹದ ಎಲ್ಲ ಭಾಗಗಳು ತಮ್ಮ ದೈನಂದಿನ ಕಾರ್ಯವನ್ನು ನಿರ್ವಹಿಸಲು ಬೇಕಾದ ಶಕ್ತಿ ದೊರೆಯಲು ಆಹಾರವನ್ನು ಸೇವಿಸಬೇಕಾಗುತ್ತದೆ. ಪ್ರತಿದಿನವು ನಾವು ಸೇವಿಸುವ ಆಹಾರವು ದೇಹದ ಬೆಳವಣಿಗೆ, ಪೋಷಣೆ ಮತ್ತು ದೇಹಕ್ಕೆ ಬೇಕಾಗುವ ಎಲ್ಲ ಪೋಷಕಾಂಶಗಳನ್ನು ನೀಡುವಂತಿದ್ದರೆ ಅದಕ್ಕೆ ಸಮತೋಲನ ಆಹಾರ ಎನ್ನುವರು.

ದಿನ ನಿತ್ಯ ಮನುಷ್ಯನು ತನ್ನ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ಆರೋಗ್ಯವಂತನಾಗಿರಲು ವಿವಿಧ ಪೋಷಕಾಂಶಗಳು ಅತೀ ಮುಖ್ಯ. ದೇಹದ ಸ್ಥಿತಿಗೆ ತಕ್ಕ ಆಹಾರ ದೊರಕದಿದ್ದಲ್ಲಿ ನ್ಯೂನ್ಯ ಪೋಷಣೆಗೆ ಒಳಗಾಗಬೇಕಾಗುತ್ತದೆ. ಅಂದರೆ ಆಹಾರದಲ್ಲಿಯ ಪೋಷಕಾಂಶಗಳಾದ ಸಸಾರಜನಕ, ಮೇದಸ್ಸು, ಶರ್ಕರಪಿಷ್ಠ, ಜೀವಸತ್ವಗಳು, ಖನಿಜ ಲವಣಗಳು ಸರಿಯಾದ ಪ್ರಮಾಣದಲ್ಲಿ ದೊರೆಯದಿದ್ದರೆ ಅಪೌಷ್ಠಿಕತೆ ಉಂಟಾಗುವುದು.

ದಿನ ನಿತ್ಯ ಊಟದಲ್ಲಿ ಸಮತೋಲನ ಆಹಾರ ಪದ್ಧತಿಯನ್ನು ಅನುಸರಿಸುವುದು ಬಹಳ ಮುಖ್ಯ. ಅದರಲ್ಲೂ ಹಣ್ಣು ಮತ್ತು ತರಕಾರಿಗಳ ಸೇವನೆ ಅತ್ಯವಶ್ಯ. ಏಕೆಂದರೆ ದೇಹಕ್ಕೆ ಬೇಕಾದ ಜೀವಸತ್ವಗಳು ಹಾಗೂ ಖನಿಜ ಲವಣಗಳು, ಹಣ್ಣು ಮತ್ತು ತರಕಾರಿಗಳಿಂದ ಒದಗುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಅವಶ್ಯವಿರುವಷ್ಟು ಹಣ್ಣು ಮತ್ತು ತರಕಾರಿಗಳನ್ನು ಬಳಸಲು ಸಾಧ್ಯವಾಗುತ್ತಿಲ್ಲ, ಯಾಕೆಂದರೆ ಅವುಗಳ ಬೆಲೆ ಗಗನಕ್ಕೇರುತ್ತಿರುವದು. ಇದರಿಂದ ನ್ಯೂನ್ಯ ಪೋಷಣೆಯನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಪರಿಹಾರವಾಗಿ ಹಿತ್ತಲದ ಸ್ಥಳ ಅಥವಾ ಮನೆಯ ಮೇಲ್ಛಾವಣಿ (ತಾರಸಿ) ತೋಟ ಮಾಡುವದರಿಂದ ಕುಟುಂಬಕ್ಕೆ ಅವಶ್ಯವಿರುವಷ್ಟು ರಾಸಾಯನಿಕ ಮುಕ್ತ ತಾಜಾ ತರಕಾರಿಗಳನ್ನು ಮನೆಯಲ್ಲಿರುವ ತಾಜ್ಯ ವಸ್ತುಗಳಾದ ಪ್ಲಾಸ್ಟಿಕ್ ಚೀಲ, ಗೊಬ್ಬರದ ಚೀಲ, ಸಿಮೆಂಟ್ ಚೀಲ, ಪ್ಲಾಸ್ಟಿಕ್ ಹಾಳೆ, ಬುಟ್ಟಿ ಹಾಗೂ ಇನ್ನಿತರ ಸಾಮಗ್ರಿಗಳನ್ನು ಉಪಯೋಗಿಸಿ ಕುಟುಂಬಕ್ಕೆ ಬೇಕಾದ ತರಕಾರಿಗಳನ್ನು ಬೆಳೆಯಬಹುದು. ಅಡುಗೆ ಮನೆಯ ತ್ಯಾಜ್ಯ ವಸ್ತುಗಳನ್ನು ಉಪಯೋಗಿಸಿ ಎರೆ ಗೊಬ್ಬರ ತಯಾರಿಸಿ ಕೈ ತೋಟ ಅಥವಾ ತಾರಸಿ ತೋಟಕ್ಕೆ ಬಳಸಬಹುದು.

3ನೇ ಪುಟಕ್ಕೆ

**ಆಹಾರದಲ್ಲಿ ಹಣ್ಣು ಮತ್ತು ತರಕಾರಿಗಳ ಮಹತ್ವ** ಪುಟ 2 ರಿಂದ ....

1) ಹಣ್ಣು ಮತ್ತು ತರಕಾರಿಗಳನ್ನು ಸೇವಿಸುವುದರಿಂದ ಜೀವಸತ್ವಗಳು ಹಾಗೂ ಖನಿಜ ಲವಣಗಳು ದೊರೆಯುತ್ತವೆ.

2) ಹಣ್ಣು ಮತ್ತು ತರಕಾರಿಗಳು ಆರೋಗ್ಯದಾಯಕ, ಸೌಂದರ್ಯವರ್ಧಕ, ರುಚಿ, ಸ್ವಾದ ಮತ್ತು ಜೀರ್ಣಶಕ್ತಿ ಹೆಚ್ಚಿಸಿಕೊಳ್ಳಲು ನೆರವಾಗುತ್ತದೆ.

3) ಕೆಲವೊಂದು ಮೂಲ ರೋಗಗಳಿಗೆ ಧನ್ವಂತರಿಯಂತೆ ಔಷಧಿ ಗುಣಗಳನ್ನು ಹೊಂದಿದ ಸೊಪ್ಪುಗಳನ್ನು ಸೇವಿಸುವುದರಿಂದ ಆಹಾರದಲ್ಲಿಯ ಪ್ರೋಟಿನ ಮತ್ತು ಕೊಬ್ಬುಗಳನ್ನು ಹಾಗೂ ಜೀರ್ಣ ಶಕ್ತಿಯಲ್ಲಿ ಉತ್ಪನ್ನಗೊಳ್ಳುವ ಆಮ್ಲಗಳನ್ನು ಸಮತೋಲನಗೊಳಿಸುವುದರಿಂದ ಮನುಷ್ಯನ ಶಕ್ತಿ ಹಾಗೂ ಬೆಳವಣಿಗೆಗೆ ಸೊಪ್ಪಿನ ತರಕಾರಿಗಳು ನೆರವಾಗುತ್ತವೆ.

4) ಹಣ್ಣು, ತರಕಾರಿ ಹಾಗೂ ಸೊಪ್ಪಿನ ಪಲ್ಲೆಗಳನ್ನು ಸೇವಿಸುವದರಿಂದ ರಕ್ತ ಹೀನತೆ ಮತ್ತು ಇರುಳುಗಣ್ಣು ಸಮಸ್ಯೆ ನೀಗುತ್ತದೆ. ಇದಲ್ಲದೇ ಮೂಳೆ ಮತ್ತು ಹಲ್ಲುಗಳ ಆರೋಗ್ಯಕ್ಕೆ ಬಹಳ ಮುಖ್ಯ

ಒಟ್ಟಾರೆಯಾಗಿ ಪೌಷ್ಠಿಕ ತೋಟ ಅಥವಾ ತಾರಸಿ ತೋಟ ಮಾಡುವುದರಿಂದ ರಾಸಾಯನಿಕ ಮುಕ್ತ ತರಕಾರಿ, ಮನೆಯ ಸುತ್ತ ನೈರ್ಮಲ್ಯತೆ, ಹಣ ಉಳಿತಾಯ ಹಾಗೂ ದೇಹಕ್ಕೆ ವ್ಯಾಯಾಮ ಮತ್ತು ಮಾನಸಿಕ ತೃಪ್ತಿ ಸಿಗುವುದು.

## ರೈತರ ಪ್ರಶ್ನೆಗಳಿಗೆ ಉತ್ತರಗಳು

**ಪ್ರಶ್ನೆ-1)** ಮಾವಿನ ಜಿಗಿ ಹುಳು ನಿಯಂತ್ರಣ ಮಾಡಲು ಯಾವ ಔಷಧಿಯನ್ನು ಸಿಂಪರಣೆ ಮಾಡಬೇಕು?

**– ಶ್ರೀ ರಾಮನಗೌಡ ಓದುಗೌಡರ, ಸಾ|| ಹುಲಕೋಟಿ, ತಾ|| ಗದಗ**

**ಉತ್ತರ :** ಮಾವಿನ ಜಿಗಿ ಹುಳು ಹತೋಟಿ ಮಾಡಲು ಇಮಿಡಾಕ್ಲೋಪ್ರಿಡ್ 0.4 ಮಿ.ಲೀ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

**ಪ್ರಶ್ನೆ-2)** ಎರೆಹುಳು ಗೊಬ್ಬರ ತಯಾರು ಮಾಡಲು 10 ಫೂಟು ಉದ್ದ 3 ಫೂಟು ಅಗಲ ಮತ್ತು 2 ಫೂಟು ಆಳ ಮಡಿಗೆ ಎಷ್ಟು ಹುಳುಗಳನ್ನು ಬಿಡಬೇಕು ತಿಳಿಸಿರಿ?

**– ಶ್ರೀ ಹರಳಯ್ಯ ಹೊಸಮನಿ, ಸಾ|| ಕುರಡಗಿ, ತಾ|| ರೋಣ**

**ಉತ್ತರ :** 10 x 3 x 2 ಅಡಿ ಅಳತೆ ಮಡಿಗೆ 2 ಕಿಲೋ ಎರೆಹುಳುಗಳನು ಬಿಡಬೇಕು.

**ಪ್ರಶ್ನೆ-3)** ಬಾಳೆ ಬೆಳೆಯಲ್ಲಿ ಬರುವ ಸಿಗಾಟೋಕಾ ಎಲೆ ಚುಕ್ಕೆ ರೋಗ ಹತೋಟಿ ಕುರಿತು ತಿಳಿಸಿರಿ.

**– ಶ್ರೀ ತಿರುಕಪ್ಪ ಬೋಳನವರ, ಸಾ|| ಸೊರಟೂರ**

**ಉತ್ತರ :** ಸಿಗಾಟೋಕಾ ಎಲೆ ಚುಕ್ಕೆ ರೋಗ ಹತೋಟಿ ಮಾಡಲು 1 ಮಿ.ಲೀ. ಪ್ರೊಪಿಕೋನಾಝೋಲ್ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ.

**ಪ್ರಶ್ನೆ-4)** ಶೇಂಗಾ ಬೆಳೆ ಬಾಧಿಸುವ ಸುರಳಿ ಪೂಚಿ ಕೀಟವನ್ನು ಹೇಗೆ ಹತೋಟಿ ಮಾಡಬಹುದು?

**– ಶ್ರೀ ಮುತ್ತಣ್ಣ ವಾಲಿ, ಸಾ|| ಮುಳಗುಂದ**

**ಉತ್ತರ :** ಸುರಳಿ ಪೂಚಿ ಕೀಟವನ್ನು ಹತೋಟಿ ಮಾಡಲು ಪ್ರೊಫೇನೋಫಾಸ್ 2 ಮಿ.ಲೀ. ಮತ್ತು ನಿಂಬಿಸಿಡಿನ 2 ಮಿ.ಲೀ ಔಷಧಿಗಳನ್ನು ಕೂಡಿಸಿ ಸಿಂಪರಣೆ ಮಾಡಬೇಕು.

**ಪ್ರಶ್ನೆ-5)** ಬಾಳೆ ಎಲೆಗಳಲ್ಲಿ ಪೊಟ್ಯಾಶ ಕೊರತೆಗೆ ಏನು ಮಾಡಬೇಕು?

**– ಶ್ರೀ ಸಂತೋಷ ಹುಯಿಲಗೋಳ, ಸಾ|| ಕಳಸಾಪೂರ**

**ಉತ್ತರ :** ಬಾಳೆ ಎಲೆಗಳಲ್ಲಿ ಪೊಟ್ಯಾಶ ಗೊಬ್ಬರದ ಕೊರತೆ ಕಂಡ ತಕ್ಷಣ 4 ಗ್ರಾಂ 13:0:45 ನೀರಿನಲ್ಲಿ ಕರಗುವ ಗೊಬ್ಬರವನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಎಲೆಗಳ ಮೇಲೆ ಸಿಂಪರಣೆ ಮಾಡಿರಿ.

**ನಮ್ಮ ಕೇಂದ್ರದಲ್ಲಿ ಮಣ್ಣು ಮತ್ತು ನೀರು ಪರೀಕ್ಷೆಯ ಸೌಲಭ್ಯವಿದ್ದು, ರೈತಬಾಂಧವರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದು. ಹಿಂಗಾರು ಬೆಳೆಗಳು ಕಟಾವ ಆದ ಕೂಡಲೆ ಮಣ್ಣು ಮಾದರಿ ಸಂಗ್ರಹಿಸಿ ಮಣ್ಣು ಪರೀಕ್ಷೆ ಮಾಡಿಸಬೇಕು**

## ತ್ರೈಮಾಸಿಕದಲ್ಲಿ (ಅಕ್ಟೋಬರ್-ಡಿಸೆಂಬರ್, ೨೦೧೪) ಹಮ್ಮಿಕೊಂಡ ಕಾರ್ಯಕ್ರಮಗಳು

**ಅಕ್ಟೋಬರ 16, 2014 :** ವಿಶ್ವ ಆಹಾರ ದಿನಾಚರಣೆ ಕಾರ್ಯಕ್ರಮವನ್ನು ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವರ್ಷದ ಘೋಷಣೆಯಾದ "ಕುಟುಂಬ ಕೃಷಿ" ವಿಷಯದಲ್ಲಿ ಚರ್ಚೆ ಹಾಗೂ ಸಣ್ಣ ರೈತರ ಅನುಭವ ಹಂಚಿಕೆ ಕಾರ್ಯಕ್ರಮವನ್ನು ಸಂಘಟಿಸಲಾಗಿತ್ತು.

**ಅಕ್ಟೋಬರ 18-20, 2014:** ಗದಗ ಜಿಲ್ಲೆಯ ವಿವಿಧ ಗ್ರಾಮಗಳ 27 ಜನ ಯುವಕ ಹಾಗೂ ಯುವತಿಯರಿಗೆ ಆಧುನಿಕ ಹೈನುಗಾರಿಕೆಯಲ್ಲಿ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು.

**ಅಕ್ಟೋಬರ 29, 2014:** ಧಾರವಾಡ ಕೃಷಿ ವಿಶ್ವ ವಿದ್ಯಾಲಯದಲ್ಲಿ ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ವಲಯ 8 ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ ವಿಜ್ಞಾನ ಕೇಂದ್ರಗಳ ಗೃಹ ವಿಜ್ಞಾನ ವಿಭಾಗದ ವಿಷಯ ತಜ್ಞರಿಗೆ ಕ್ಷೇತ್ರ ಭೇಟ್ಟಿಯನ್ನು ನಮ್ಮ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಯಿತು. ಕ್ಷೇತ್ರ ಭೇಟ್ಟಿಯಲ್ಲಿ ಗೃಹ ವಿಜ್ಞಾನದ ಚಟುವಟಿಕೆಗಳ ಕುರಿತು ತರಬೇತಿ, ಮೌಲ್ಯವರ್ಧಿತ ಪದಾರ್ಥಗಳ ವಸ್ತು ಪ್ರದರ್ಶನ, ಕೆ.ವಿ.ಕೆ ಮಾರಾಟ ಮಳಿಗೆ ಮತ್ತು ಯಶಸ್ವಿ ಉದ್ದಿಮೆದಾರರ ಘಟಕಗಳಿಗೆ ಭೇಟ್ಟಿಯನ್ನು ಏರ್ಪಡಿಸಲಾಗಿತ್ತು.

**ನವಂಬರ 1-3, 2014:** ಗದಗ ಜಿಲ್ಲೆಯ ವಿವಿಧ ಗ್ರಾಮಗಳ 33 ಜನ ಯುವಕ ಹಾಗೂ ಯುವತಿಯರಿಗೆ ಆಧುನಿಕ ಕುರಿ ಮತ್ತು ಆಡು ಸಾಕಾಣಿಕೆಯಲ್ಲಿ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು.

**ನವಂಬರ 4, 2014 :** ಅಂತೂರ ಬೆಂತೂರ ಗ್ರಾಮದಲ್ಲಿ ಸರ್ಪನ ಹೈಬ್ರೀಡ್ ಸೀಡ್ಸ ಅವರು ಏರ್ಪಡಿಸಿದ ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ತೋಟಗಾರಿಕೆ ತಜ್ಞರಾದ ಶ್ರೀ ಕೆ.ಟಿ.ಪಾಟೀಲ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮೆಣಸಿನಕಾಯಿ ಬೆಳೆಯ ಕುರಿತು ತರಬೇತಿಯನ್ನು ನೀಡಿದರು.

**ನವಂಬರ 11-13, 2014:** ಕೃಷಿ ವಿಜ್ಞಾನ ಕೇಂದ್ರ, ಪಟ್ಟಣಂತಿಟ್ಟ, ಕೇರಳದಲ್ಲಿ ಕೆವಿಕೆಗಳ "ದತ್ತಾಂಶ ನಿರ್ವಹಣೆ" ಕುರಿತು ಏರ್ಪಡಿಸಿದ ತರಬೇತಿಯಲ್ಲಿ ಕೇಂದ್ರದ ಕಂಪ್ಯೂಟರ ಪ್ರೋಗ್ರಾಮರಾದ ಶ್ರೀಮತಿ ಲಲಿತಾ ಶಿ. ಅಸೂಟಿ ಇವರು ಭಾಗವಹಿಸಿದ್ದರು.

**ನವಂಬರ 14, 2014 :** ಸಿಂಡಿಕೇಟ್ ಬ್ಯಾಂಕ್, ಹುಲಕೋಟಿ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಪಂಚಾಯತಿಯ "ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ" ಅಡಿಯಲ್ಲಿ ಹುಲಕೋಟಿ, ಅಸುಂಡಿ, ಬಿಂಕದಕಟ್ಟಿ ಗ್ರಾಮಗಳಲ್ಲಿ ರಚಿತವಾದ ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕಿನ ಸೌಲಭ್ಯಗಳು, ಗುಂಪುಗಳ ನಿರ್ವಹಣೆ, ಗ್ರಾಮೀಣ ಮಹಿಳೆಯರ ಸಶಕ್ತೀಕರಣ ಹಾಗೂ ಆದಾಯ ತರುವಂತಹ ಚಟುವಟಿಕೆಗಳ ಕುರಿತು ತರಬೇತಿಯನ್ನು ನೀಡಲಾಯಿತು.

**ನವಂಬರ 18, 2014 :** ರೋಣ ತಾಲೂಕಿನ ಕುರಡಗಿ ಗ್ರಾಮದ ಶಂಕರಗೌಡ ಎ. ಜಕ್ಕನಗೌಡರ ಇವರ ಹಿತ್ತಲದಲ್ಲಿ ಅಜೋಲ್ಲಾ ಉತ್ಪಾದನೆಯ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಯಿತು.

**ನವಂಬರ 24, 2014 :** ತೋಟಗಾರಿಕೆ ಇಲಾಖೆ ಇವರ ಸಹಯೋಗದೊಂದಿಗೆ "ಮಾವಿನ ಬೆಳೆಯಲ್ಲಿ ಸುಧಾರಿತ ಪದ್ಧತಿಗಳು" ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ತರಬೇತಿಯಲ್ಲಿ ಬೇಸಾಯ ಪದ್ಧತಿಗಳು, ಕೀಟ ಹಾಗೂ ರೋಗದ ಬಾಧೆ ಮತ್ತು ಕೊಯ್ಲು ನಂತರದ ತಂತ್ರಜ್ಞಾನ ಕುರಿತು ಮಾಹಿತಿಯನ್ನು ನೀಡಲಾಯಿತು.

**ಡಿಸೆಂಬರ 1-6, 2014 :** ಹೈದರಾಬಾದಿನ ಮ್ಯಾನೇಜ ಸಂಸ್ಥೆಯವರು ಏರ್ಪಡಿಸಿದ ತರಬೇತಿದಾರರ ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ಪಶು ಸಂಗೋಪನೆ ತಜ್ಞರಾದ ಡಾ|| ಬಿ.ಎಮ್. ಮುರಗೋಡ ಇವರು ಭಾಗವಹಿಸಿದ್ದರು.

**ಡಿಸೆಂಬರ 8-13, 2014 :** ಹೈದರಾಬಾದಿನ ಮ್ಯಾನೇಜ ಸಂಸ್ಥೆಯವರು ಏರ್ಪಡಿಸಿದ "ಶಹರ ಕೃಷಿ" ತರಬೇತಿಯಲ್ಲಿ ಕೇಂದ್ರದ ತೋಟಗಾರಿಕೆ ವಿಷಯ ತಜ್ಞರಾದ ಶ್ರೀ ಕೆ.ಟಿ.ಪಾಟೀಲ ಇವರು ಭಾಗವಹಿಸಿದ್ದರು.

**ಡಿಸೆಂಬರ 15-21, 2014 :** ಹೈದರಾಬಾದಿನ ಮ್ಯಾನೇಜ ಸಂಸ್ಥೆಯವರು ಏರ್ಪಡಿಸಿದ "ಕೃಷಿ ವಿಸ್ತರಣೆಯಲ್ಲಿ ನಡವಳಿಕೆಗಳ ಆಯಾಮಗಳ ಕುರಿತು" ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ಕೃಷಿ ವಿಸ್ತರಣೆ ತಜ್ಞರಾದ ಶ್ರೀ ಎಸ್.ಎಚ್.ಆದಾಪೂರ ಇವರು ಭಾಗವಹಿಸಿದ್ದರು.

**ಡಿಸೆಂಬರ 23 ಮತ್ತು 26, 2014 :** ರಿಲೈಯನ್ಸ ಫೌಂಡೇಶನ್ ಗದಗ ಇವರ ಸಹಯೋಗದೊಂದಿಗೆ ಗದಗ ತಾಲೂಕಿನ ನಭಾಪೂರ ಮತ್ತು ಬೆಳಧಡಿ ಗ್ರಾಮದಲ್ಲಿ ಬರಡು ದನಗಳ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

**ಡಿಸೆಂಬರ 23, 2014:** ಮಾಜಿ ಪ್ರಧಾನಿ ದಿವಗಂತ ಶ್ರೀ ಚೌಧರಿ ಚರಣಸಿಂಗ ಇವರ ಜಯಂತ್ಯೋತ್ಸವದ ಅಂಗವಾಗಿ ರೈತ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸುರಕ್ಷಿತ ಸಸ್ಯ ಸಂರಕ್ಷಣೆ ಬಳಕೆ ಕುರಿತು ತರಬೇತಿಯನ್ನು ಸಂಘಟಿಸಲಾಯಿತು.

## ತ್ರೈಮಾಸಿಕದಲ್ಲಿ (ಅಕ್ಟೋಬರ್ – ಡಿಸೆಂಬರ್, ೨೦೧೪) ಹಮ್ಮಿಕೊಂಡ ಕಾರ್ಯಕ್ರಮಗಳು



**ಅಕ್ಟೋಬರ 16, 2014** : ಮರ ವಿಜ್ಞಾನ ಸಂಸ್ಥೆ, ಬೆಂಗಳೂರು ಇವರ ಸಹಯೋಗದೊಂದಿಗೆ ತೋಟಗಾರಿಕೆ ಬೇಸಾಯದಲ್ಲಿ ಗಂಧದ ಬೆಳೆ ಕುರಿತು ಕೇಂದ್ರದಲ್ಲಿ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಗದಗ ಜಿಲ್ಲೆಯ 120 ಜನ ರೈತರು ತರಬೇತಿಯಲ್ಲಿ ಭಾಗವಹಿಸಿದ್ದರು.



**ನವಂಬರ 5, 2014** : 2014–15 ನೇ ಸಾಲಿನ "ಕಡಲೆ ಬೆಳೆಯ ಸಮಗ್ರ ಪೋಷಕಾಂಶಗಳ ನಿರ್ವಹಣೆ" ಪ್ರಾತ್ಯಕ್ಷಿಕೆ ಯೋಜನೆ ಅಡಿ ಸೈಕಲ್ ವ್ಹೀಡರ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಯಿತು.



**ಡಿಸೆಂಬರ 19, 2014** : 2014–15 ನೇ ಸಾಲಿನಲ್ಲಿ ಬಿ.ಟಿ. ಹತ್ತಿ ಬೆಳೆಯಲ್ಲಿ ಸಮಗ್ರ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆ ಯೋಜನೆ ಅಡಿ ಹತ್ತಿ ಬಿಡಿಸುವ ಚೀಲಗಳ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಯಿತು.



**ಡಿಸೆಂಬರ 9–10, 2014** : 2014–15 ನೇ ಸಾಲಿನ ಮುಂಚೂಣಿ ಪ್ರಾತ್ಯಕ್ಷಿಕೆ ಯೋಜನೆ ಅಡಿ ಹುಲಕೋಟಿ ಸ್ವ ಸಹಾಯ ಗುಂಪಿನ ಮಹಿಳೆಯರಿಗೆ ನವಣೆ ಮೌಲ್ಯವರ್ಧಿತ ಪದಾರ್ಥಗಳು ಹಾಗೂ ಮಾರಾಟದ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಯಿತು.



**ಡಿಸೆಂಬರ್ 11, 16, 17 ಮತ್ತು 22, 2014** : ರಿಲೈಯನ್ಸ ಫೌಂಡೇಶನ್, ಗದಗ ಇವರ ಸಂಯುಕ್ತ ಆಶ್ರಯದಲ್ಲಿ ಶ್ಯಾಗೋಟಿ, ಹೊಸಳ್ಳಿ, ಹಿರೇಹಂದಿಗೋಳ ಹಾಗೂ ಪಾಪನಾಶಿ ಗ್ರಾಮದ ಮಹಿಳೆಯರಿಗೆ ಆದಾಯ ತರುವಂತಹ ಚಟುವಟಿಕೆಗಳು ಮತ್ತು ಮಹಿಳೆಯರ ಸಶಕ್ತೀಕರಣ ಕುರಿತು ತಿಳುವಳಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು

**ಅಕ್ಟೋಬರ್–ಡಿಸೆಂಬರ್ 2014** : "ಸ್ವಚ್ಛ ಭಾರತ ಆಂದೋಲನದ ಕಾರ್ಯಕ್ರಮದ" ಅಂಗವಾಗಿ ಕೇಂದ್ರದಲ್ಲಿ ಅಕ್ಟೋಬರ್ 2 ರಿಂದ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು. ನರಗುಂದ ತಾಲೂಕಿನ ಅರಿಷಿಣಗೋಡಿ ಗ್ರಾಮದಲ್ಲಿ ಕೇಂದ್ರದ ಸಹಯೋಗದೊಂದಿಗೆ ರೈತ ಗುಂಪುಗಳಿಂದ ಕೆರೆಯ ಸ್ವಚ್ಛತೆ ಕಾರ್ಯವನ್ನು ಕೈಗೊಳ್ಳಲಾಯಿತು ಮತ್ತು ಮಹಿಳೆಯರಿಗೆ ಆಹಾರ, ಆರೋಗ್ಯ, ಸ್ವಚ್ಛತೆ, ಸುಧಾರಿತ ಒಲೆಗಳ ಬಳಕೆ ಕುರಿತು ನರಗುಂದ ತಾಲೂಕಿನ ಅರಿಷಿಣಗೋಡಿ, ಗದಗ ತಾಲೂಕಿನ ಅಸುಂಡಿ ಹಾಗೂ ಬೆಳದಡಿ ಮತ್ತು ರೋಣ ತಾಲೂಕಿನ ಕುರಡಗಿ ಗ್ರಾಮದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು





**ನವಂಬರ 8, 2014** : ಗದಗ ತಾಲೂಕಿನ ಹಿರೇಹಂದಿಗೋಳ ಗ್ರಾಮದ ಅಂದಪ್ಪ ಜಿ. ಬ್ಯಾಹಟ್ಟಿ ಇವರ ಹೊಲದಲ್ಲಿ ಈರುಳ್ಳಿ ತಳಿಗಳಾದ ಅರ್ಕಾ ಭೀಮ, ಭೀಮಾ ಸೂಪರ, ಅರ್ಕಾ ಕಲ್ಯಾಣ ಹಾಗೂ ಸ್ಥಳೀಯ ತಳಿಯಾದ ಬಳ್ಳಾರಿ ತಳಿಗಳ ಪರಿಶೀಲನೆ ಮತ್ತು ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಯಿತು.



**ಅಕ್ಟೋಬರ 1, 2014** : ಗದಗ ತಾಲೂಕಿನ ಹಿರೇಹಂದಿಗೋಳ ಗ್ರಾಮದಲ್ಲಿ "ಶೇಂಗಾ ಬೆಳೆಯಲ್ಲಿ ವಿವಿಧ ತಳಿಗಳಾದ ಕದರಿ–6, ಕದರಿ–9, ಜಿ2–52 ಹಾಗೂ ಟಿ.ಎಮ್.ವಿ–13 ತಳಿಗಳ ಪರಿಶೀಲನೆಯನ್ನು ಕೈಗೊಂಡು ಹನುಮಂತಪ್ಪ ಬಸಪ್ಪ ಹಡಪದ ಇವರ ಹೊಲದಲ್ಲಿ ಕ್ಷೇತ್ರೋತ್ಸವನ್ನು ಹಮ್ಮಿಕೊಳ್ಳಲಾಯಿತು.



**ಅಕ್ಟೋಬರ 22, 2014** : ಮುಂಡರಗಿ ತಾಲೂಕಿನ ಕಕ್ಕೂರ ಗ್ರಾಮದ ತಿಮ್ಮಣ್ಣ ಸುಗನಳ್ಳಿ ಇವರ ಹೊಲದಲ್ಲಿ "ಗೋವಿನ ಜೋಳದ ಸಮಗ್ರ ಬೆಳೆ ನಿರ್ವಹಣೆ" ಯಲ್ಲಿ ಕ್ಷೇತ್ರೋತ್ಸವನ್ನು ಹಮ್ಮಿಕೊಳ್ಳಲಾಯಿತು.



**ಅಕ್ಟೋಬರ 27, 2014** : ಬಿ.ಟಿ ಹತ್ತಿ ಬೆಳೆಯಲ್ಲಿ ಹಾಗೂ ಗೋವಿನ ಜೋಳದ ಬೆಳೆಗಳಲ್ಲಿ ಸಮಗ್ರ ಬೆಳೆ ನಿರ್ವಹಣೆ ಕುರಿತು ಕ್ಷೇತ್ರೋತ್ಸವನ್ನು ಗದಗ ತಾಲೂಕಿನ ಬೆಳಧಡಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು.

ತೆರೆದ ಅಂಚೆ

**PRINTED MATTER**

ಇವರಿಂದ :
**ಡಾ|| ಎಲ್.ಜಿ. ಹಿರೇಗೌಡರ**
**ಕಾರ್ಯಕ್ರಮ ಸಂಯೋಜಕರು**
**ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ**
**ಹುಲಕೋಟಿ–582 205,**
**ಗದಗ ಜಿಲ್ಲೆ**
ದೂರವಾಣಿ : (08372) 289606
ಇ–ಅಂಚೆ : kvkhulkoti@gmail.com
ಅಂತರ್‌ಜಾಲ : www.khpkvk.org

ಇವರಿಗೆ, ____________________